

ಇನ್ನಷ್ಟು ಶೋಧಿಸುತ್ತಾ, ಕಂಟೆಂಟ್‌ಗಳನ್ನು ಹಾಕುತ್ತಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ಕಡಿಮೆ ಅವಧಿಯಲ್ಲಿಯೇ ಸಿಕ್ಕ ದೊಡ್ಡ ಮಟ್ಟದ ಪ್ರತಿಕ್ರಿಯೆಯು ಹೆಚ್ಚು ವಿಡಿಯೊಗಳನ್ನು ಚಿತ್ರೀಕರಿಸಲು ಪ್ರೇರಣೆ ನೀಡಿತು.

ಪ್ರಾರಂಭದಲ್ಲಿ ತಿಂಗಳಿಗೆ ಮೂರು ವಿಡಿಯೊಗಳನ್ನು ಕಲ್ಯಾಣಿ ಅಪ್‌ಲೋಡ್ ಮಾಡುತ್ತಿದ್ದರು. ಹಿಂದಿ, ಕನ್ನಡದ ಸಿನಿಮಾ ಹಾಡುಗಳಿಗೆ ನೃತ್ಯ ಮಾಡಿ, ಆ ವಿಡಿಯೊಗಳನ್ನು ಹಾಕುತ್ತಿದ್ದರು. ಆಮೇಲೆ ನೃತ್ಯದ ಸನ್ನಿವೇಶವನ್ನೇ ಮರುಸೃಷ್ಟಿಸುವ ಆಲೋಚನೆ ಮೂಡಿತು. ‘ಪ್ರೇಮಲೋಕ’ ಸಿನಿಮಾದ ‘ನೋಡಮ್ಮ ಹುಡುಗಿ ಕೇಳಮ್ಮಾ ಸರಿಯಾಗಿ...’ ಹಾಡಿನ ದೃಶ್ಯಗಳನ್ನು ಮರುಸೃಷ್ಟಿಸಿದರು. ಸಿನಿಮಾದಲ್ಲಿ ಜೂಹಿ ಚಾವ್ಲಾ ಸ್ಕರ್ಟ್ ಹಾಕಿದ್ದಂತೆ ತಾವೂ ಹಾಕಿಕೊಂಡು ಹೆಜ್ಜೆ ಹಾಕಿದರು. ಆ ವಿಡಿಯೊ ವೈರಲ್ ಆಯಿತು. ಐಫೋನ್‌ನಲ್ಲಿ ಚಿತ್ರೀಕರಿಸಿದ್ದ ವಿಡಿಯೊ ಅದು. ಅದರಿಂದ ಸ್ಫೂರ್ತಿ ಪಡೆದು ‘ಫನ್ನಿ ವಿಡಿಯೊ’ಗಳನ್ನು ಮಾಡತೊಡಗಿದರು. ಅಪ್ಪ, ಅಮ್ಮ, ಬಸವ್ವ... ಹೀಗೆ ಎಲ್ಲ ಪಾತ್ರಗಳಿಗೂ ಕಲ್ಯಾಣಿ ತಾವೇ ಜೀವ ತುಂಬಿದರು. ಅಪ್ಪನ ಪಾತ್ರ ಬಂದಾಗ ಮೀಸೆ ಅಂಟಿಸಿಕೊಳ್ಳುವುದು, ಅವ್ವನಾಗಬೇಕಾದಾಗ ಸೀರೆ ಉಡುವುದು, ಬಸವ್ವನಾಗಬೇಕಾದಾಗ ಬೇರೆ ಶೈಲಿಯಲ್ಲಿ ಮಾತನಾಡುವುದು... ಹೀಗೆ ಈ ನಟಿ ಬಹುಪಾತ್ರಧಾರಿಯಾಗಿ ಕಾಣಿಸಿಕೊಂಡರು. ಓದಲು ಪಿ.ಜಿ.ಯಲ್ಲಿರುವ ಮಗಳು ಅಪರೂಪಕ್ಕೆ ಊರಿಗೆ ಬರುತ್ತಾಳೆ ಎಂದಾಗ, ಮನೆಗೆಲಸ ಮಾಡಲು ತನಗೆ ನೆರವಿಗೆ ಸಿಗುತ್ತಾಳೆ ಎಂದು ಸ್ಕೆಚ್ ಹಾಕುವ ಅವ್ವ, ಟ್ರಿಪ್‌ಗೆ ಹಣ ಕೇಳಲು ಉಪಾಯ ಮಾಡುವ ಮಗಳು, ಮದುವೆಗೆ ಮುನ್ನ – ಮದುವೆಯ ನಂತರ ದಾಂಪತ್ಯದ ಬದಲಾವಣೆ... ಹೀಗೆ ಜನರಿಗೆ ಹತ್ತಿರವಾದ ಸಂಗತಿಗಳನ್ನೇ ಆಧರಿಸಿದ ಕಂಟೆಂಟ್ ರೂಪಿಸುತ್ತಾ ಹೋದರು ಕಲ್ಯಾಣಿ.

ತಮ್ಮ ಬಾವನ ಇಂಟೀರಿಯರ್ ಕಂಪನಿಯಲ್ಲಿ ಕೆಲಸ ಮಾಡುವ ಕಲ್ಯಾಣಿ ಅವರಿಗೆ ಖುದ್ದು ನಟಿಯಾಗಬೇಕು ಎನ್ನುವ ಕನಸಿದೆ. ಅದಕ್ಕೆ ಚಿಮ್ಮುಹಲಗೆಯಾಗಲಿ ಎಂಬ ಉದ್ದೇಶದಿಂದಲೇ ಅವರು ಇಷ್ಟೆಲ್ಲವನ್ನೂ ಮಾಡುತ್ತಿದ್ದಾರೆ. ಮೊದಲಿಗೆ ಸಾಹಿಲ್, ನಿತೀಶ್, ಜೀವನ್, ಪ್ರತೀಕ್ ಎಂಬ ಸ್ನೇಹಿತರು ಅವರ ವಿಡಿಯೊ ಪಯಣದ ಸಾಥಿಗಳಾಗಿದ್ದರು. ಈಗ ಎಲ್ಲರೂ ತಂತಮ್ಮ ಕೆಲಸ, ಅಧ್ಯಯನದಲ್ಲಿ ಬ್ಯುಸಿ ಆದರು. ತಿಂಗಳಲ್ಲಿ ನಾಲ್ಕೈದು ವಿಡಿಯೊಗಳನ್ನು ಹಾಕುವ ಹವ್ಯಾಸವನ್ನು ಕಲ್ಯಾಣಿ ಈಗಲೂ ಉಳಿಸಿಕೊಂಡು ಬಂದಿದ್ದಾರೆ.

ಈ ಮಾಧ್ಯಮವು ಅವರಿಗೆ ದೊಡ್ಡ ಮಟ್ಟದ ಆದಾಯವನ್ನು ತಂದಿತ್ತಿಲ್ಲವಾದರೂ, ಕೆಲವು ಪ್ರೋಮೊಗಳಿಂದ ಹಣವನ್ನು ಕಂಡಿರುವ ಅನುಭವವಿದೆ.

ಹಿಂದಿಯಲ್ಲಿ ಹಾಸ್ಯದ ವಿಡಿಯೊಗಳನ್ನು ಮಾಡುವ ಭುವನ್ ಬಾಮ್ ಅವರನ್ನು ಮೆಚ್ಚಿಕೊಳ್ಳುವ ಕಲ್ಯಾಣಿ, ಇನ್‌ಸ್ಟಾಗ್ರಾಂನಲ್ಲಿ ಪ್ರಿಯಾಂಕಾ ಚೋಪ್ರಾ, ಸುದೀಪ್, ಯಶ್, ರಾಧಿಕಾ ಪಂಡಿತ್ ಇವರನ್ನೆಲ್ಲ ಫಾಲೋ ಮಾಡುತ್ತಾರೆ. ವೆಬ್‌ಸೀರೀಸ್, ಸಿನಿಮಾಗಳನ್ನು ನೋಡುವಾಗಲೆಲ್ಲ ಅದರಿಂದ ತಮ್ಮ ಕಂಟೆಂಟ್‌ಗೆ ಏನು ಸ್ಫೂರ್ತಿ ಸಿಗುತ್ತದೋ ಎಂಬ ಹುಡುಕಾಟವೊಂದು ಸದಾ ಇದ್ದೇ ಇರುತ್ತದೆ.

ಈಗಲೂ ಕಲ್ಯಾಣಿ ಅವರಿಗೆ ತಮ್ಮ ತಾಯಿಯೇ ವಿಡಿಯೊಗ್ರಾಫರ್. ಮಗಳ ಮನರಂಜನಾ ಬದುಕು ಇನ್ನೂ ಒಂದು ಸ್ತರ ಮೇಲೇಳಲಿ ಎಂದು ಕನಸು ಕಾಣುತ್ತಿರುವ ಎಷ್ಟೋ ತಾಯಂದಿರ ಸಾಲಿನಲ್ಲಿ ಅವರೂ ಇದ್ದಾರೆ.

## ಪ್ರಜಾಸತ್ತಾತ್ಮಕ ಮನರಂಜನೆ

ಯೂಟ್ಯೂಬ್‌ನಿಂದಾಗಿ ಮನರಂಜನಾ ಜಗತ್ತು ಹೆಚ್ಚು ಪ್ರಜಾಸತ್ತಾತ್ಮಕಗೊಂಡಿದೆ. ಮನರಂಜನೆಯ ಬಹು ಮುಖ್ಯ ಮಾಧ್ಯಮವಾದ ಸಿನಿಮಾ ಎಲ್ಲರಿಗೂ ಎಟಕುವಂತಹದ್ದಲ್ಲ. ಹೆಚ್ಚು ಹಣ ತೊಡಗಿಸಬೇಕಾದ ಕಾರಣದಿಂದಾಗಿ ಸಿನಿಮಾ ಮಾಧ್ಯಮ ಎಲ್ಲರಿಗೂ ಮುಕ್ತವಾಗಿಲ್ಲ. ಸಿನಿಮಾದ ಈ ಸಂಕೀರ್ಣತೆ ಟೀವಿ ಮಾಧ್ಯಮದಲ್ಲಿ ಕೊಂಚ ಸರಳಗೊಂಡು, ಜನಸಾಮಾನ್ಯರೂ ಅಲ್ಪ ಪ್ರಮಾಣದಲ್ಲಿ ಮನರಂಜನಾ ಕ್ಷೇತ್ರದಲ್ಲಿ ಗುರ್ತಿಸಿಕೊಳ್ಳುವುದು ಸಾಧ್ಯವಾಗಿದೆ. ಈ ಸಾಧ್ಯತೆ ದೊಡ್ಡ ಪ್ರಮಾಣದಲ್ಲಿ ಸಾಕಾರಗೊಂಡಿರುವುದು ಯೂಟ್ಯೂಬ್‌ನಲ್ಲಿ. ಮೊಬೈಲ್ ಫೋನ್ ಎಲ್ಲರ ಕೈಗೂ ಎಟಕುವಂತಿರುವ ಕಾರಣದಿಂದಾಗಿ, ಯೂಟ್ಯೂಬ್ ಪ್ರತಿಭಾ ಪ್ರದರ್ಶನದ ವೇದಿಕೆಯಾಗಿ ಬಳಕೆಯಾಗುತ್ತಿದೆ.

ಹಳ್ಳಿಯ ಹುಡುಗ ಹುಡುಗಿ, ಚರ್ಮ ಸುಕ್ಕಾದ ಅಜ್ಜಿ, ಅಕ್ಷರ ಅರಿಯದ ಹಿರೀಕ, ಶಾಲೆಗೆ ಹೋಗುವ ಚಿನಕುರುಳಿ, ಅಮ್ಮ–ಮಗಳು... ಹೀಗೆ ಯಾರು ಬೇಕಾದರೂ ಯೂಟ್ಯೂಬ್ ಮೂಲಕ ತಮ್ಮನ್ನು ಜಗತ್ತಿಗೆ ಪರಿಚಯಿಸಿಕೊಳ್ಳಬಹುದಾಗಿದೆ. ಯೂಟ್ಯೂಬ್ ಮೂಲಕ ಕೀಳರಿಮೆಯನ್ನು ಕಳೆದುಕೊಂಡು ಆತ್ಮವಿಶ್ವಾಸ ರೂಢಿಸಿಕೊಂಡವರಿದ್ದಾರೆ. ತಮ್ಮಲ್ಲಿನ ಕೊರತೆಗಳನ್ನೇ ವಿಡಂಬಿಸಿಕೊಂಡು ಜನಮೆಚ್ಚುಗೆ ಪಡೆದವರಿದ್ದಾರೆ. ಪ್ರತಿಭೆಯ ಜೊತೆಗೆ ಕೊಂಚ ಅದೃಷ್ಟವೂ ಇದ್ದಲ್ಲಿ, ಯೂಟ್ಯೂಬರ್‌ಗಳಾಗಿ ಹಣವನ್ನೂ ಗಳಿಸಬಹುದಾಗಿದೆ. ಯೂಟ್ಯೂಬ್ ಮನರಂಜನಾ ಜಗತ್ತಿನ ನಾಳೆಗಳು ಸದ್ಯಕ್ಕಂತೂ ಉಜ್ವಲವಾಗಿ ಕಾಣುತ್ತಿವೆ.

ಪ್ರತಿಕ್ರಿಯಿಸಿ: feedback@sudha.co.in